ಸಾಕ್ಷಿಯನ್ನು ದಿನಾಂಕ **12-11-2025** ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ- ಆರೋಪಿ ಪರ ಶ್ರೀ ಜಿ.ಕೆ. ವಕೀಲರಿಂದ .

ದೂರು ಕೊಡಲು ನಮಗೆ ಯಾರು ಮಾಹಿತಿ ಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ಸಿಸಿಟಿವಿಯಲ್ಲಿ ನೋಡಿರುತ್ತೇನೆ ಎಂದು ಹೇಳುತ್ತಾರೆ. ನಾನು ಘಟನೆಯನ್ನು ಖುದ್ದಾಗಿ ನೋಡಿಲ್ಲ ಎಂದರೆ ಸರಿ. ನನ್ನ ಹೆಂಡತಿ ಚಾಸಾ-2 ರವರು ಘಟನೆ ಬಗ್ಗೆ ನನಗೆ ಮಾಹಿತಿ ಕೊಟ್ಟಿರುತ್ತಾರೆಂದು ನಿಪಿ-1 ರಲ್ಲಿ ಬರೆಸಲು ನನಗೆ ತೊಂದರೆ ಇರಲಿಲ್ಲ ಎಂದರೆ ಸಾಕ್ಷಿಯು ನನ್ನ ಹೆಂಡತಿ ಮಾಹಿತಿ ಕೊಟ್ಟಿರುತ್ತಾರೆಂದು ಬರೆಸಿರುತ್ತೇನೆ ಎಂದು ಹೇಳುತ್ತಾರೆ. ನಾನು ಅ ರೀತಿ ನಿಪಿ-1 ರಲ್ಲಿ ಬರೆಸಿಲ್ಲದಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಯಾವ ದಿನಾಂಕದಂದು ಮತ್ತು ಯಾವ ಸಮಯಕ್ಕೆ ಘಟನೆ ಬಗ್ಗೆ ನನಗೆ ಗೊತ್ತಾಯಿತು ಎಂದು ನಿಪಿ-1 ರಲ್ಲಿ ಬರೆಸಲು ನನಗೆತೊಂದರೆ ಇರಲಿಲ್ಲ ಎಂದರೆ ಸಾಕ್ಷಿ 2019 ರಲ್ಲಿ ಗೊತ್ತಾಯಿತು ಎಂದು ಹೇಳುತ್ತಾರೆ. ಘಟನೆಯಾಯಿತು ಎಂದು ಹೇಳುವ ದಿನದಂದು ದೂರು ಕೊಟ್ಟಿದ್ದೀರಾ ಎಂದರೆ ಸಾಕ್ಷಿಯು ಅ ದಿನ ನಾನು ಬೆಂಗಳೂರಿನಲ್ಲಿ ಇದ್ದೆ, 24 ನೇ ತಾರೀಖು ಜೂನ್-2023 ರಲ್ಲಿ ಊರಿಗೆ ಬಂದು ದೂರು ಕೊಟ್ಟಿರುತ್ತೇನೆ ಎಂದು ಹೇಳುತ್ತಾರೆ. ನಾನು ಬೆಂಗಳೂರಿನಿಂದ ಬಂದು ಆರೋಪಿಯನ್ನು ಕೇಳಿರುತ್ತೇನೆ. ಆಗ ಆರೋಪಿಯು ನನಗೆ ಸೂಳೆಮಗನೆ ಬೊಳಿಮಗನೆ ಎಂದು ಬೈಯ್ದು ಕೊಲೆ ಮಾಡುತ್ತೇನೆಂದು ಬೆದರಿಕೆ ಹಾಕಿರುತ್ತಾನೆ.

ಆಗ ಸಮಯ ಬೆಳಗ್ಗೆ 10.30 ಆಗಿತ್ತು. ಅದೇ ದಿನ ಸಂಜೆ ಪೋಲಿಸ್ ಠಾಣೆಗೆ ದೂರು ಕೊಡಲು ಹೋಗಿದ್ದು ಆ ದಿನ ಪೋಲಿಸರು ದೂರು ತೆಗೆದುಕೊಳ್ಳಲಿಲ್ಲ ನಂತರ 2-3 ದಿನ ಠಾಣೆಗೆ ಹೋಗಿದ್ದು ಪೋಲಿಸರು ದೂರು ತೆಗೆದುಕೊಂಡಿರುವುದಿಲ್ಲ ಹಾಗು 28 ನೇ ತಾರೀಖಿನಂದು ದೂರು ತೆಗೆದುಕೊಂಡಿರುತ್ತಾರೆ ಎಂದು ಹೇಳುತ್ತಾರೆ. ದೂರು ಕೊಡಲು ವಿಳಂಬ ಆಗಿರುವ ಬಗ್ಗೆ ನಿಪಿ-1 ರಲ್ಲಿ ಬರೆಯಲು ತೊಂದರೆ ಇರಲಿಲ್ಲ ಎಂದರೆ ಸಾಕ್ಷಿಯು ಘಟನೆಯಾಗಿದೆ ಅದೆಲ್ಲಾ ಅವಶ್ಯಕತೆ ಇಲ್ಲ ಎಂದು ಪೋಲಿಸರು ನನಗೆ ತಿಳಿಸಿದ್ದು ಹಾಗಾಗಿ ನಾನು ದೂರು ಕೊಡಲು ವಿಳಂಬ ಆಗಿರುವುದಕ್ಕೆ ಕಾರಣವನ್ನು ದೂರಿನಲ್ಲಿ ನಿಪಿ-1 ರಲ್ಲಿ ಹೇಳಿರುವುದಿಲ್ಲ ಎಂದು ಹೇಳುತ್ತಾರೆ.

ಘಟನೆ ನಡೆದಿದೆ ಎಂದು ಹೇಳುವ ಜಮೀನಿನ ಸರ್ವೆ ನಂಬರ್ ಎಷ್ಟು ಎಂದರೆ ಸಾಕ್ಷಿಯು ಸ.ನಂ-10/6 ಎಂದು ಹೇಳುತ್ತಾರೆ. ಸದರಿ ಸರ್ವೆ ನಂಬರ್ ನ್ನು ನಿಪಿ-1 ರಲ್ಲಿ ಬರೆಯಲು ತೊಂದರೆ ಇರಲಿಲ್ಲ ಎಂದರೆ ಸಾಕ್ಷಿಯು ನಿಪಿ-1 ರಲ್ಲಿ ಬರೆದಿಲ್ಲ ಅದರೆ ಪೋಲಿಸರು ನಿಪಿ-2 ರಲ್ಲಿ ಬರೆದಿರುತ್ತಾರೆ ಎಂದು ಹೇಳುತ್ತಾರೆ.

ಘಟನೆ ನಡೆದಿದೆ ಎಂದು ಹೇಳುವ ಸ್ಥಳದ ಚೆಕ್ಕುಬಂದಿ ಹೇಳುತ್ತಿರಾ ಎಂದರೆ ಸಾಕ್ಷಿಯು ಪೂರ್ವಕ್ಕೆ ಕೃಷ್ಣಕುಮಾರಿ ಬಿನ್ ಜಯಶೀಲ ರವರ ಜಮೀನು, ಪಶ್ಚಿಮಕ್ಕೆ ರಾಮಚಂದ್ರ ಬಿನ್ ಸತ್ಯನಾರಾಯಣ ರವರ ಜಮೀನು, ಉತ್ತರಕ್ಕೆ ಶ್ರೀದೇವಿ ಬಿನ್ ಜಯಶೀಲ ರವರ ಜಮೀನು, ದಕ್ಷಿಣಕ್ಕೆ ರಾಜ್ಯಹೆದ್ದಾರಿ ಇದೆ ಎಂದು ಹೇಳುತ್ತಾರೆ. ನಾನು ಹೇಳಿದಂತ ಚೆಕ್ಕುಬಂದಿಯಲ್ಲಿ ಯಾವುದೇ ಸ್ದಳ ಇಲ್ಲ ಮತ್ತು

ಘಟನೆಯಾಗಿಲ್ಲ ಎಂದರೆ ಸರಿಯಲ್ಲ. ಆರೋಪಿ ನನ್ನ ದೊಡ್ಡಮ್ಮನ ಮಗ. ಆರೋಪಿಯು ಸಹ ನನ್ನ ಮೇಲೆ ಒಂದು ದೂರು ಕೊಟ್ಟಿರುತ್ತಾರೆ ಎಂದರೆ ಸರಿ. ಅದೇ ರೀತಿ ಆರೋಪಿ ಹೆಂಡತಿಯು ಸಹ ನನ್ನ ವಿರುದ್ದ ದೂರು ಕೊಟ್ಟಿರುತ್ತಾರೆ ಎಂದರೆ ಸರಿ. ಆರೋಪಿಯು ನಮ್ಮ ವಿರುದ್ದ ಅಸಲು ದಾವ ಸಂಖ್ಯೆ 122/2023 ರಂತೆ ಸಿವಿಲ್ ದಾವೆ ದಾಖಲಿಸಿರುತ್ತಾರೆ ಎಂದರೆ ಸರಿ. ಸದರಿ ದಾವೆ ಇನ್ನು ವಿಚಾರಣೆಗೆ ಇದೆ ಎಂದರೆ ಸರಿ.

ಎಷ್ಟನೇ ತಾರೀಖಿಗೆ ಪೋಲಿಸರು ಮಹಜರ್ ಗೆ ಬಂದಿರುತ್ತಾರೆ ಎಂದರೆ ಸಾಕ್ಷಿಯು ದಿಃ29.06.2023 ರಂದು ಎಂದು ಹೇಳುತ್ತಾರೆ. ಅ ಸಮಯದಲ್ಲಿ ಸ್ಥಳದಲ್ಲಿ ಎಷ್ಟು ಜನರು ಸೇರಿದ್ದರು ಎಂದರೆ ಸಾಕ್ಷಿಯು ನಾನು ಇದ್ದೆ, ಪೋಲಿಸರು ಇದ್ದರು, ಚಾಸಾ-2 ಮತ್ತು ಚಾಸಾ-4 ಮತ್ತು 5 ರವರು ಇದ್ದರು ಎಂದು ಹೇಳುತ್ತಾರೆ. ಚಾಸಾ-4 ಮತ್ತು 5 ರವರು ನನಗೆ ಪರಿಚಯ ಇದ್ದು ಅವರನ್ನು ನಾನೇ ಸ್ಥಳಕ್ಕೆ ಕರೆಸಿದ್ದೆ ಎಂದರೆ ಸರಿ. ನಿಪಿ-2 ನ್ನು ಬರೆಯಲು ಪೋಲಿಸರಿಗೆ ಯಾರು ಮಾಹಿತಿ ಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ನಾನೇ ಮಾಹಿತಿ ಕೊಟ್ಟಿರುತ್ತೇನೆ ಎಂದು ಹೇಳುತ್ತಾರೆ. ಸಾಕ್ಷಿಗೆ ಈಗ ನಿಪಿ-2 ನ್ನು ತೋರಿಸಿ ಅದರಲ್ಲಿ ರಸ್ತೆ ಬದಿ ಎಲ್ಲೂ ನಮೂದು ಇಲ್ಲ ಎಂದರೆ ಸಾಕ್ಷಿಯು ರಾಜ್ಯ ಹೆದ್ದಾರಿ ಇದೆ ಎಂದು ಹೇಳುತ್ತಾರೆ. ಒಂದು ಪಕ್ಷ ಅಲ್ಲಿ ರಸ್ತೆ ಇದ್ದರೆ ಅದರ ಬಗ್ಗೆ ನಿಪಿ-2 ರಲ್ಲಿ ನಾನು ಬರೆಸಬಹುದಾಗಿತ್ತು ಎಂದರೆ ಸಾಕ್ಷಿಯು ತಾಂತ್ರಿಕ ಕಾರಣ ನನಗೆ ಗೊತ್ತಾಗಿಲ್ಲ ಎಂದು ಹೇಳುತ್ತಾರೆ ಸದರಿ ರಸ್ತೆಯು ಶಿವಮೊಗ್ಗ ಹೊಸನಗರ ಮುಖ್ಯ ರಸ್ತೆಯಾಗಿರುತ್ತದೆ. ಸಾಕ್ಷಿಗೆ ನಿಪಿ-4 ಮತ್ತು 5 ತೋರಿಸಿ ಅವುಗಳಲ್ಲಿ ರಸ್ತೆ ಇಲ್ಲ

ಎಂದರೆ ಸಾಕ್ಷಿಯು ಸದರಿ ಎರಡು ಭಾವಚಿತ್ರಗಳು ಕೃತ್ಯ ನಡೆದ ಸ್ಥಳಕ್ಕೆ ಸಂಬಂಧಪಟ್ಟಿರುತ್ತವೆ ಎಂದು ಹೇಳುತ್ತಾರೆ. ನಿಪಿ-4 ಮತ್ತು 5 ಕೃತ್ಯ ಸ್ಥಳಕ್ಕೆ ಸಂಬಂಧಪಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಗೆ ಈಗ ನಿಪಿ-3 ಕಚ್ಚಾ ನಕಾಶೆಯನ್ನು ತೋರಿಸಿ ಅದರಲ್ಲಿ ಸಹ ರಸ್ತೆ ಬಗ್ಗೆ ಎಲ್ಲಿ ನಮೂದು ಇಲ್ಲ ಎಂದರೆ ಸಾಕ್ಷಿಯು ಪೋಲಿಸರು ಏಕೆ ರಸ್ತೆಯನ್ನು ನಮೂದು ಮಾಡಿಲ್ಲ ಎಂದು ಗೊತ್ತಿಲ್ಲ ಎಂದು ಹೇಳುತ್ತಾರೆ.

ಗಲಾಟೆ ನಡೆಯುವ ಸಂಧರ್ಭದಲ್ಲಿ ನನ್ನ ಜೊತೆ ಪತ್ನಿ ಇದ್ದರು. ಗಲಾಟೆ ಸಮಯದಲ್ಲಿ ಚಾಸಾ-2 ರವರು ಇದ್ದರು ಎಂದು ನಿಪಿ-1 ರಲ್ಲಿ ಹೇಳಲು ತೊಂದರೆ ಇರಲಿಲ್ಲ ಎಂದರೆ ಸರಿ. ನಾವು ತೊಂದರೆ ಕೊಟ್ಟಿದ್ದಕ್ಕೆ ಆರೋಪಿಯು ನಮ್ಮ ವಿರುದ್ದ ದೂರು ದಾಖಲಿಸಿದಕ್ಕೆ ಆರೋಪಿಗೆ ತೊಂದರೆ ಕೊಡಲು ನಾವು ದೂರು ಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ನಮ್ಮ ಮತ್ತು ಆರೋಪಿತರ ಮಧ್ಯೆ ಸಿವಿಲ್ ವ್ಯಾಜ್ಯ ಇದ್ದು ಅವರಿಗೆ ತೊಂದರೆ ಕೊಡಲು ಸುಳ್ಳು ದೂರು ನೀಡಿರುತ್ತೇವೆ ಎಂದರೆ ಸರಿಯಲ್ಲ. ನಾನು ನಿಪಿ-1 ರಲ್ಲಿ ಹೇಳಿದಂತೆ ಆರೋಪಿತರು ನಮ್ಮನ್ನು ಅಡ್ಡಗಟ್ಟಿದಾಗಲಿ, ಅವಾಚ್ಯ ಶಬ್ದಗಳಿಂದ ಬೈದಿಗಾಲಿ ಜೀವ ಬೆದರಿಕೆ ಹಾಕಿದ್ದಗಲ್ಲಿ ಸುಳ್ಳು ಎಂದರೆ ಸರಿಯಲ್ಲ. ಅದೇ ರೀತಿ ಆರೋಪಿತರು ಅಕ್ರಮವಾಗಿ ನಮ್ಮ ಜಮೀನಿಗೆ ಪ್ರವೇಶ ಮಾಡಿ ಗಲಾಟೆ ಮಾಡಿ 25,000/- ಅರ್ಥಿಕ ನಷ್ಟ ಉಂಟು ಮಾಡಿರುತ್ತಾರೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಕೃತ್ಯ ನಡೆದ ಸ್ಥಳದಲ್ಲಿ ಪೋಲಿಸರು ನಿಪಿ-2 ರಿಂದ 5 ತಯಾರಿಸಿರುವುದು ಸುಳ್ಳು

ಎಂದರೆ ಸರಿಯಲ್ಲ. ನಾನು ಆರೋಪಿಗೆ ತೊಂದರೆ ಕೊಡುವ ಉದ್ದೇಶದಿಂದ ಸದರಿ ದೂರನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

(ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.)

ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ಹೊಸನಗರ.